


## ಭಾಗ-1

ಈ ಪೆದ್ದ ಸಿಟೀಲೊ ಎಕ್ಕಡುನ್ನಾಡೊ, ಎಕ್ಕಡ ವೆದುಕಾಲೊ, ಎವರನಿ ಅಡಗಾಲೊ... ನಾವಲ್ಲ ಕಾದು... ಎನ್ನುತ್ತ ವೆಂಕಟಗಿರಿ ರಾಣಿ ಚೌಲ್ಟ್ರಿ ಪಕ್ಕದ ಗಲ್ಲಿಯ ಮೂಲೆಯಲ್ಲಿದ್ದ ಟೀ ಅಂಗಡಿಯ ಮುಂದಿದ್ದ ಖಾಲಿ ಬೆಂಚಿನ ಮೇಲೆ ಉಸ್ ಎಂದು ಸದ್ದು ಮಾಡುತ್ತ ಕೂತ. ಒಮ್ಮೆ ಸುತ್ತ ಕಣ್ಣಾಡಿಸಿದ. ಸದ್ಯ, ಯಾರೂ ನೋಡುತ್ತಿಲ್ಲ ಅನ್ನಿಸಿ ಅವನಿಗೆ ಸಮಾಧಾನವಾಯಿತು.

ಅಂಗಡಿಯಿಂದ ಸ್ವಲ್ಪ ದೂರದಲ್ಲಿ ಐದಾರು ಹುಡುಗರು ತಗ್ಗಿದ ಧ್ವನಿಯಲ್ಲಿ ಮಾತಾಡಿಕೊಳ್ಳುತ್ತ, ಆಗಾಗ ದೊಡ್ಡದಾಗಿ ನಗುತ್ತ ಟೀ ಕುಡಿಯುತ್ತಿದ್ದಾರೆ. ಗಾರೆ ಕೆಲಸದ ಹುಡುಗರಿರಬಹುದು. ಆಗಷ್ಟೇ ಕೆಲಸ ಮುಗಿಸಿ, ಕೈಕಾಲು ತೊಳೆದು ಬಟ್ಟೆ ಬದಲಾಯಿಸಿ ಬಂದವರಂತೆ ಕಾಣುತ್ತಿದ್ದರು. ಅವರಿಗೆ ಕೊಂಡಯ್ಯ ಗೊತ್ತಿರಬಹುದೇ? ಕೇಳಿ ನೋಡೋಣವೇ ಅಂದುಕೊಂಡ. ಯಾವ ಕೊಂಡಯ್ಯ ಅಂತ ಅವರು ಕೇಳಿದರೆ ಏನು ಹೇಳೋದು? ಮೇಸ್ತ್ರಿ ಕೊಂಡಯ್ಯ ಅಂತ ಹೇಳಿದರೆ ಗೊತ್ತಾಗಬಹುದು ಅನ್ನಿಸಿತು. ಕೇಳುವುದು ಬೇಡ ಅನ್ನಿಸಿ ಸುಮ್ಮನಾದ.

ಪೊಲೀಸರ ಕಣ್ಣಿಗೆ ಬೀಳದೆ, ಯಾರಿಗೂ ಅನುಮಾನ ಬರದ ಹಾಗೆ ನೀವು ಕೊಂಡಯ್ಯನ್ನ ಹುಡುಕಬೇಕು. ಅವನು ಸಿಕ್ಕ ಮೇಲೆ ನಿಮ್ಮ ಕೆಲಸ ಏನು ಅನ್ನೋದನ್ನು ಅವನೇ ಹೇಳ್ತಾನೆ ಅಂತ ಪೆದ್ದಾಯನ ಹೇಳಿದ್ದರು.

ಕೊಂಡಯ್ಯ ನಮ್ಮವನೇ. ಅಲ್ಲಿ ಮೇಸ್ತ್ರಿ ಕೆಲಸ ಮಾಡಿಕೊಂಡಿದ್ದಾನೆ. ಕೆಲಸ ಅವನಿಗೆ ಒಂದು ನೆಪ ಅಷ್ಟೇ. ಅವನಿಗೆ ಬೇರೆ ಕೆಲಸ ಹೇಳಿದೀನಿ. ಅವನ ಅಡ್ರಸ್ ನಂಗೆ ಗೊತ್ತಿಲ್ಲ. ಅಲ್ಲಿ ಹಳೇ ಬಸ್‌ಸ್ಟ್ಯಾಂಡ್ ಹಿಂದೆ ರಾಣಿಚೌಲ್ಟ್ರಿ ಇದೆ. ಅಲ್ಲಿಗೆ ಹೋಗಿ ರೂಮು ತಗಂಡು ಇರಿ. ಊರಲ್ಲಿ ಅಡ್ಡಾಡಿಕೊಂಡೇ ಕೊಂಡಯ್ಯನ್ನ ಹುಡುಕಿ. ಎಲ್ಲಿ ಹೊಸ ಕಟ್ಟಡ ಕಟ್ಟುತ್ತಿದ್ದಾರೊ ಅಲ್ಲಿಗೇ ಹೋಗಿ ನೋಡಿ. ಅಲ್ಲೇ ಎಲ್ಲೋ ಇರ್ತಾನೆ. ಲಕ್ಷ್ಮಣನಿಗೆ ಗಾರೆ ಕೆಲಸ ಗೊತ್ತು. ಅವನೂ ನಿಮ್ಮ ಜತೆ ಬರ್ತಾನೆ. ಅವನು ಕಬ್ಬಿಣ, ಸಿಮೆಂಟು ಮಾರೋ ಅಂಗಡಿಗಳ ಹತ್ರ ಹೋಗಿ ಹುಡುಕಲಿ.

ಒಂದು ವಾರದೊಳಗೆ ನೀವು ಅಲ್ಲಿ ಯಾವುದಾದರೂ ಕೆಲಸ ಹುಡುಕಿಕೊಳ್ಳಬೇಕು. ಆ ಮೇಲೆ ಕೆಲಸ ಮಾಡುತ್ತಲೇ ಸಂಜೆ ಹೊತ್ತು ಕೊಂಡಯ್ಯನ್ನ ಹುಡುಕಿ ಅಂತ ಕಡಪಾದಿಂದ ಹೊರಡುವ ದಿನ ಪೆದ್ದಾಯನ ಸ್ಪಷ್ಟವಾಗಿ ಹೇಳಿದ್ದರಲ್ಲದೆ ಅವನ ಫೋಟೊವೊಂದನ್ನು ಕೊಟ್ಟು ಕಳಿಸಿದ್ದರು. ಯಾವ ಕಾರಣಕ್ಕೂ ಯಾರೂ ಮೊಬೈಲ್ ಫೋನ್ ಇಟ್ಟುಕೊಳ್ಳಬೇಡಿ. ತೀರಾ ಅಗತ್ಯ ಬಿದ್ದರೆ, ಏನಾದರೂ ಹೇಳಲೇಬೇಕು ಅಂತಿದ್ದರೆ ಲ್ಯಾಂಡ್ ಫೋನ್‌ನಿಂದ ಮಾತಾಡಿ ಅಂತಲೂ ಹೇಳಿದ್ದರು.

ಪೆದ್ದಾಯನ ಕೊಟ್ಟ ಫೋಟೊ ಕೊಂಡಯ್ಯನದಲ್ಲ. ಅದು ಚಿತ್ತೂರು ನಾರಾಯಣನದು ಅಂತ ವೆಂಕಟಗಿರಿಗೆ ಗೊತ್ತು. ನಾರಾಯಣ ಜೈಲಿನಲ್ಲಿ